ನಂಬಿಕೆಯಿದೆ. ಅದೆಂದರೆ, 'ಮಾನವನ ಆತ್ಮದ ಸ್ಥಳ ಪರಮಾತ್ಮನ ಬಳಿ; ಆದರೆ, ಅವನ ಕರ್ಮಫಲದ ಕಾರಣದಿಂದ ಅವನ ಆತ್ಮ ಪರಮಾತ್ಮನಿಂದ ದೂರವಾಗಿ, ಈ ಭೂಮಿಯ ಮೇಲೆ ಜೀವಿಸುತ್ತಿದೆ; ಈ ಜೀವನದ ಏಕೈಕ ಉದ್ದೇಶವೆಂದರೆ ತನ್ನ ಭಕ್ತಿಯ ಮೂಲಕ ಮತ್ತೆ ಪರಮಾತ್ಮನೊಡನೆ ಜೀವಾತ್ಮ ಒಂದಾಗುವುದು. ಪರಿಣಾಮತಃ, ಎಲ್ಲಾ ಸಂತರೂ ನಂಬುವುದು ಹಾಗೂ ಅಭಿವ್ಯಕ್ತಿಗೊಳಿಸುವುದು 'ಅಲ್ಲಿದೆ ನಮ್ಮ ಮನೆ; ಇಲ್ಲಿರುವುದು ಸುಮ್ಮನೆ.'



ಅನೇಕ ಸಂತ ಕವಿ-ಕವಯಿತ್ರಿಯರಲ್ಲಿ ಕಂಡುಬರುವ ಈ ಬಗೆಯ ಮಧುರ ಭಕ್ತಿಗೆ ಎರಡು ಪ್ರಮುಖ ಕಾರಣಗಳನ್ನು ಕಾಣಬಹುದು. ಮೊದಲನೆಯದು ಮಾನಸಿಕ ಕಾರಣ: ಮನಃಶಾಸ್ತ್ರಜ್ಞರು ಮಂಡಿಸುವಂತೆ, ತನ್ನ ಪ್ರೇಮಿಯಿಂದ ದೂರವಿರುವ ಪ್ರಿಯತಮೆಯ ಆತಂಕ, ಹಂಬಲ, ಚಡಪಡಿಕೆ, ಇತ್ಯಾದಿ ತೀವ್ರ ಭಾವನೆಗಳನ್ನೊಳಗೊಂಡ ಅನುಭವ ಸ್ತ್ರೀಗೆ ಮಾತ್ರ ಸಾಧ್ಯ; ಪುರುಷನಿಗೆ ಆ ಬಗೆಯ ಉತ್ಕಟ ಅನುಭವ ಅಸಾಧ್ಯ. ಆದುದರಿಂದ ಪುರುಷ ಸಂತರು ಅಂತಹ ಉತ್ಕಟ ಅನುಭವವನ್ನು ತಾವೂ ಪಡೆಯಲು ಹಾಗೂ ದಾಖಲಿಸಲು ತಮ್ಮನ್ನು ಸ್ತ್ರೀಯರಂತೆ ಕಲ್ಪಿಸಿಕೊಳ್ಳುತ್ತಾ ತಮ್ಮ ಗುರಿ ಮುಟ್ಟಲು ಪ್ರಯತ್ನಿಸುತ್ತಾರೆ. ಅನೇಕ ಮಧುರ ಭಕ್ತರು ಇನ್ನೂ ಮುಂದೆ ಹೋಗಿ, ತಾವೂ ಸ್ತ್ರೀಯರ ವಸ್ತ್ರಗಳನ್ನು ಧರಿಸಿ, ಸ್ತ್ರೀಯರಂತೆಯೇ ವರ್ತಿಸುತ್ತಾರೆ. (ಈ ಸಂದರ್ಭದಲ್ಲಿ, ಮೊದಲ ಭಾಗದಲ್ಲಿ ಉಪಯೋಗಿಸಿದ ಪರಿಕಲ್ಪನೆಯನ್ನೇ ಮುಂದುವರೆಸುವುದಾದರೆ, ಭಕ್ತ-ಇಷ್ಟದೈವ ಇವರ ನಡುವೆ ಇರುವ ಈ ಬಗೆಯ ಸಂಬಂಧವನ್ನು 'ಲಿಂಗಭೇದವನ್ನು ದಾಟುವಿಕೆ' ಅಥವಾ Gender Crossing ಎಂದು ಗುರುತಿಸಬಹುದು.)

ಎರಡನೆಯ ಕಾರಣ ಸಾಹಿತ್ಯಕ. ಸ್ತ್ರೀಯ ಸಂವೇದನೆ ತುಂಬಾ ಸೂಕ್ಷ್ಮ ಹಾಗೂ ಉತ್ಕಟವಾಗಿರುವುದರಿಂದ, ಭಕ್ತ-ಇಷ್ಟದೈವದ ನಡುವೆ ಇರುವ ಅಮೂರ್ತ ಸಂಬಂಧವನ್ನು ಕಾವ್ಯದ ಮೂಲಕ ಮೂರ್ತ ರೂಪದಲ್ಲಿ ದಾಖಲಿಸಲು ಮಧುರ ಭಕ್ತಿ ಎಡೆಮಾಡಿಕೊಡುತ್ತದೆ; ತನ್ನ ಪ್ರಿಯಕರನಿಗಾಗಿ ಪ್ರಿಯತಮೆ ಹಂಬಲಿಸುವುದು ಭಕ್ತನು ತನ್ನ ಇಷ್ಟದೈವದ ಸಾನ್ನಿಧ್ಯಕ್ಕಾಗಿ ಹಂಬಲಿಸುವುದರ ಅತ್ಯಂತ ಸಮರ್ಥ ರೂಪಕವಾಗುತ್ತದೆ. ಮಧುರ ಭಕ್ತಿ ಕಾವ್ಯವು ಈ ನೆಲೆಯಲ್ಲಿಯೇ ಅನ್ಯೋಕ್ತಿಯ (ಅಲಿಗರಿ) ಸ್ವರೂಪವನ್ನು ಪಡೆಯುತ್ತದೆ: ವಿರಹದಿಂದ ತಪಿಸುವ ಪ್ರೇಮಿ = ಭಕ್ತ/ಭಕ್ತೆ, ದೂರದಲ್ಲಿದ್ದು ಪ್ರೇಮಿಯನ್ನು ಕಾಡುವ ಪ್ರಿಯತಮ = ಇಷ್ಟದೈವ. ವಿರಹದ ಕಾರಣದಿಂದ ಉದ್ಭವಿಸುವ ನೋವು, ತಲ್ಲಣ, ಕಾತುರ, ಹಂಬಲ, ವಾಸ್ತವ ಪ್ರಪಂಚವನ್ನು ಕುರಿತ ನಿರಾಸಕ್ತಿ, ಇವೆಲ್ಲವೂ ಎಂದೂ ಪ್ರತ್ಯಕ್ಷವಾಗದ ಇಷ್ಟದೈವಕ್ಕಾಗಿ ಭಕ್ತನು/ಭಕ್ತೆಯು ಅನುಭವಿಸುವ ಭಾವನಾ ವಿಶೇಷಗಳು. (ಈ ಕಾರಣದಿಂದಲೇ ಮಧುರಭಕ್ತಿ ಕಾವ್ಯದ ಲೈಂಗಿಕ ವಿವರಗಳು ವಿಪ್ರಲಂಭ ಶೃಂಗಾರವನ್ನು ಚಿತ್ರಿಸುತ್ತವೆಯೇ ಹೊರತು ಸಂಭೋಗ ಶೃಂಗಾರವನ್ನಲ್ಲ.)